ANNEXURE–3

ಕರ್ನಾಟಕ ಧನ ವಿನಿಯೋಗ (ಸಂಖ್ಯೆ 3) ವಿಧೇಯಕ 1986,

(1986ರ ಕರ್ನಾಟಕ ವಿಧಾನಸಭಾ ವಿಧೇಯಕ ಕ್ರಮಾಂಕ 19)

1982–83ನೇ ಹಣಕಾಸು ವರ್ಷದಲ್ಲಿ ಕೆಲವು ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಆದರೊಳಗಿಂದ ಮಂಜೂರು ಮಾಡಿದ ಮೊಬಲಗಿಗೆ ಹೆಚ್ಚಿಗೆಯಾಗಿ ವಹಿಸಿದ ವೆಚ್ಚಗಳನ್ನು ಕ್ರಮಗೊಳಿಸಲು ಅಧಿಕಾರ ನೀಡಲು ಒಂದು ವಿಧೇಯಕ.

1982-83ನೇ ಹಣಕಾಸು ವರ್ಷದಲ್ಲಿ ಕೆಲವು ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಆದರೊಳಗಿಂದ ಮಂಜೂರು ಮಾಡಿದ ಮೊಬಲಗಿಗೆ ಹೆಚ್ಚಿಗೆಯಾಗಿ ವಹಿಸಿದ ವೆಚ್ಚಗಳನ್ನು ಕ್ರಮಗೊಳಿಸುವುದಕ್ಕಾಗಿ ಅಧಿಕಾರ ನೀಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಮೂವತ್ತೇಳನೆಯ ವರ್ಷದಲ್ಲಿ ಕರ್ನಾಟಕ ರಾಜ್ಯದ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗಲಿ,

1. ಸಂಕ್ಷಿಪ್ತ ಹೆಸರು.—ಈ ಅಧಿನಿಯಮವನ್ನು ಕರ್ನಾಟಕ ಧನವಿನಿಯೋಗ ಅಧಿನಿಯಮ, 1986 ಎಂದು ಕರೆಯತಕ್ಕದ್ದು,

2. ಕರ್ನಾಟಕ ರಾಜ್ಯದ ಸಂಚಿತ ನಿಧಿಯೊಳಗಿಂದ 1982-83ನೇ ಹಣಕಾಸು ವರ್ಷದಲ್ಲಿ ಹೆಚ್ಚಿಗೆಯಾಗಿ ವಹಿಸಿದ ವೆಚ್ಚಗಳನ್ನು ತಂಬುವುದಕ್ಕಾಗಿ 31,53,45,984 ರೂಪಾಯಿಗಳ ನೀಡಿಕೆ.—ಅನುಸೂಚಿಯ 2ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ ಸೇವೆಗಳ ಸಂಬಂಧದಲ್ಲಿ 1982–83ನೇ ಹಣಕಾಸು ವರ್ಷದಲ್ಲಿ ಮಂಜೂರು ಮಾಡಿದ ಮೊಬಲಗಿಗೆ ಹೆಚ್ಚಿಗೆಯಾಗಿ ವಹಿಸಿದ ವೆಚ್ಚಗಳನ್ನು ಕ್ರಮಗೊಳಿಸುವುದಕ್ಕಾಗಿ ಅನುಸೂಚಿಯ 5ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾಗಿರುವ ಮೂವತ್ತೊಂದು ಕೋಟಿ ಐವತ್ತಮೂರು ಲಕ್ಷ ನಲವತ್ತೈದು ಸಾವಿರದ ಒಂಬೈನೂರ ಎಂಬತ್ತನಾಲ್ಕು ರೂಪಾಯಿಗಳ ಮೊಬಲಗನ್ನು ಮಾತ್ರ ಕರ್ನಾಟಕ ರಾಜ್ಯ ಸಂಚಿತ ನಿಧಿಯಿಂದ ಮತ್ತು ಆದರೊಳಗಿಂದ ಸಂದಾಯವಾಗಿ ಉಪಯೋಗಿಸಲಾಗಿದೆ ಎಂದು ಭಾವಿಸತಕ್ಕದ್ದು.

3. ಧನ ವಿನಿಯೋಗ.—ಈ ಅಧಿನಿಯಮದ ಮೂಲಕ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಆದರೊಳಗಿಂದ ಸಂದಾಯ ಮಾಡಲು ಮತ್ತು ಉಪಯೋಗಿಸಲು ಅಧಿಕಾರ ನೀಡಲಾದ ಮೊತ್ತಗಳನ್ನು 1982–83ನೇ ವರ್ಷಕ್ಕೆ ಸಂಬಂಧಪಟ್ಟಂತೆ ಅನುಸೂಚಿಯಲ್ಲಿ ತಿಳಿಸಲಾದ ಸೇವೆಗಳು ಮತ್ತು ಉದ್ದೇಶಗಳಿಗಾಗಿ ವಿನಿಯೋಗಿಸಿದೆ ಎಂದು ಭಾವಿಸತಕ್ಕದ್ದು.

ಅನುಸೂಚಿ

(2 ಮತ್ತು 3ನೇ ಪ್ರಕರಣಗಳನ್ನು ನೋಡಿ)

ಬೇಡಿಕೆ ಸಂಖ್ಯೆ	ಸೇವೆಗಳು ಮತ್ತು ಉದ್ದೇಶಗಳು	ವಿಧಾನ ಸಭೆಯಿಂದ ಪುರಸ್ಕೃತವಾದುದನ್ನು	ಸಂಚಿತ ನಿಧಿಯಿಂದ ಪ್ರಭೃತವಾದುದನ್ನು	ಒಟ್ಟು
		ವೀರೆದ ಮೊಬಲಗು		
೧	೨	೩	೪	೫
೧	ಕೃಷಿ (ತೋಟಗಾರಿಕೆ ಮತ್ತು ಬರಗಾಲಕ್ಕೆ ಗುರಿಯಾದ ಪ್ರದೇಶಗಳ ಯೋಜನೆ ಹೊರತು) (ರಾಜಸ್ವ)	—	೫,೪೫,೩	೫,೪೫,೩
೪	ಪಶು ಸಂಗೋಪನೆ ಮತ್ತು ಡೈರಿ ಅಭಿವೃದ್ಧಿ (ರಾಜಸ್ವ)	೫೦,೨೨,೧೮೭	—	೫೦,೨೨,೧೮೭
೫	ಉದ್ಯಮಗಳು (ಚಿಕ್ಕಪುಟ್ಟ ಉದ್ಯಮಗಳು ಮತ್ತು ರೇಷ್ಮೆ ವ್ಯವಸಾಯದ ಹೊರತು) ರಾಜಸ್ವ)	—	೧,೧೮,೩೯೨	೧,೧೮,೩೯೨
೮	ರೇಷ್ಮೆ ವ್ಯವಸಾಯ (ರಾಜಸ್ವ)	೧,೮೦,೩೬,೯೫೬	—	೧,೮೦,೩೬,೯೫೬
೧೩	ಪ್ರಾಥಮಿಕ ಮತ್ತು ವಯಸ್ಕರ ಶಿಕ್ಷಣ (ಬಂಡವಾಳ)	೨೧,೦೦,೦೦೦	—	೨೧,೦೦,೦೦೦
—	ಆಂತರಿಕ ಋಣ ಕೇಂದ್ರ ಸರ್ಕಾರದಿಂದ ಸಾಲ ಮತ್ತು ಅಂತರ ರಾಜ್ಯ ತೀರಿಕೆ (ಬಂಡವಾಳ)	—	೧೫,೩೦,೭೪,೯೭೧	೧೫,೩೦,೭೪,೯೭೧
೨೪	ಪೋಲೀಸ್ ಮತ್ತು ಅಗ್ನಿಶಾಮಕ ಸೇವೆ (ರಾಜಸ್ವ)	೨೩,೮೮,೪೬೪	—	೨೩,೮೮,೪೬೪
೨೯	ಜನಾರೋಗ್ಯ (ರಾಜಸ್ವ)	೭೫,೫೩,೮೧೯	—	೭೫,೫೩,೮೧೯
೩೪	ನೀರಾವರಿ ಜನಸಂಚಾರಿ ಒಳಚರಂಡಿ ಮತ್ತು ಪ್ರವಾಹ ನಿಯಂತ್ರಣ ಯೋಜನೆಗಳು (ರಾಜಸ್ವ) (ಬಂಡವಾಳ)	೭,೬೪,೨೬೯	—	೭,೬೪,೨೬೯
೩೫	ರಾಜ್ಯ ವಿಧಾನ ಸಭೆ (ರಾಜಸ್ವ)	—	೮೧,೫೭,೭೭೬	೮೧,೫೭,೭೭೬
೩೬	ನ್ಯಾಯ ಪರಿಪಾಲನೆ (ರಾಜಸ್ವ)	—	೫೫,೭೪,೬೯೩	೫೫,೭೪,೬೯೩
೩೮	ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕ ಸೇವಾ ಆಯೋಗ (ರಾಜಸ್ವ)	—	೨೪,೦೫೧	೨೪,೦೫೧
೩೯	ಸಚಿವಾಲಯ (ರಾಜಸ್ವ)	೧೧,೭೧,೮೮೫	—	೧೧,೭೧,೮೮೫
೪೦	ಜಿಲ್ಲಾಡಳಿತ (ರಾಜಸ್ವ)	೮೦,೧೭,೬೦೩	—	೮೦,೧೭,೬೦೩
೪೩	ಲೋಕೋಪಯೋಗಿ ಕಾಮಗಾರಿ (ನಿರ್ಮಾಣ ರಹಿತ) (ರಾಜಸ್ವ)	೧,೫೯,೪೭,೭೨೧	—	೧,೫೯,೪೭,೭೨೧

೪೪	ಕಟ್ಟಡಗಳು (ರಾಜಸ್ವ)	೧,೦೯ ೧೭,೩೯೧	—	೧,೦೯,೧೭,೩೯೧
೪೫	ರಸ್ತೆಗಳು ಮತ್ತು ಸೇತುವೆಗಳು (ರಾಜಸ್ವ)	೧,೯೭,೯೫,೨೬೫	—	೧,೯೭,೯೫,೨೬೫
	(ಬಂಡವಾಳ)	೧,೨೧,೨೫೪	—	೧,೨೧,೨೫೪
೪೬	ನೀರು ಮತ್ತು ಜಲಸಾರಿಗೆ ಸೇವೆಗಳು (ಬಂಡವಾಳ)	೭,೫೮,೭೦೯	—	೭,೫೮,೭೦೯
	(ರಾಜಸ್ವ)	—	೩೯೯	೩೯೯
೪೮	ಭೂ ಕಂದಾಯ ಇತ್ಯಾದಿ (ರಾಜಸ್ವ)	—	೨೪,೩೪೯	೨೪,೩೪೯
೫೩	ವಕ್ಫ್ (ರಾಜಸ್ವ)	೨.೦೩,೦೦೦	—	೨.೦೩,೦೦೦
೫೯	ರಾಷ್ಟ್ರೀಯ ಗ್ರಾಮೀಣ ಉದ್ಯೋಗ	೫,೭೫,೮೮,೫೨೨	—	೫,೭೫,೮೮,೫೨೨
	ಯೋಜನೆಗಳು (ರಾಜಸ್ವ)			
೬೦	ಕಾರ್ಮಿಕ ಮತ್ತು ಉದ್ಯೋಗ (ರಾಜಸ್ವ)	೨೪.೨೭,೧೫೦	—	೨೪,೨೭,೧೫೦
	ಒಟ್ಟು ಜುಮ್ಲ	೧೫,೨೮,೧೪,೧೯೫	೧೬,೨೫,೩೧,೭೮೯	೩೧,೫೩,೪೫,೯೮೪

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

1982-83ನೇ ಹಣಕಾಸು ವರ್ಷದಲ್ಲಿ ಕೆಲವು ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿನಿಂದ ವಿನಿಯೋಗ ಮಾಡಲಾದ ಮೊಬಲಗಿಗಿಂತ ಹೆಚ್ಚಿಗೆಯಾಗಿ ವಹಿಸಿದ ಪಚ್ಚುಗಳನ್ನು ಕ್ರಮಗೊಳಿಸಲು ಭಾರತ ಸಂವಿಧಾನದ 205 (1) (ಬಿ) ನೇ ಅನುಚ್ಛೇದದ ಉಪ ಬಂಧಗಳಿಗನುಸಾರವಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

ರಾಮಕೃಷ್ಣ ಹೆಗಡೆ
ಮುಖ್ಯಮಂತ್ರಿ

ಕೆ. ಎಸ್. ಸಿಂಗ್ರಿಗೌಡ,
ಕಾರ್ಯದರ್ಶಿ.